**ಓ.ಎಸ್. ನಂ. 17/2023** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 11.7.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಹೆಚ್.ಕೆ.ಪಿ ವಕೀಲರಿಂದಃ</u>

ದಾವಆಸ್ತಿಯಲ್ಲಿ ಪಾಲು ನೀಡಬೇಕೆಂದು ಈ ದಾವೆ ಹಾಕಿರುತ್ತೇನೆ. ನನ್ನ ಮದುವೆಯಾಗಿ 50 ವರ್ಷವಾಗಿರುತ್ತದೆ. 1 ನೇ ವಾದಿಯ ಮದುವೆಯಾಗಿ 55 ವರ್ಷವಾಗಿರುತ್ತದೆ. ನಾನು ನನ್ನ ಹಾಗೂ 1 ನೇ ವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ಹಾಗೂ 1 ನೇ ವಾದಿಯ ಮದುವೆಯಾದಾಗ ನಮ್ಮ ಕುಟುಂಬಕ್ಕೆ ಸಾಕಷ್ಟು ಸಾಲ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡಿದ್ದರಿಂದ ನನ್ನ ತಮ್ಮಂದಿರೇ ನಮ್ಮ ಮದುವೆ ಮಾಡಿರುತ್ತಾರೆ. ನನ್ನ ಹಾಗೂ 1 ನೇ ವಾದಿಯ ಮದುವೆ ಮಾಡಿದಾಗ ಅಂದಾಜು 10 ರಿಂದ 15 ಸಾವಿರ ಖರ್ಚಾಗಿರುತ್ತದೆ. ನನ್ನ ತಮ್ಮಂದಿರು ಸಾಲ ಮಾಡಿ ನಮ್ಮ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮದುವೆಯಾದಾಗ ನನ್ನ ತಮ್ಮಂದಿರು ಎಷ್ಟು ಸಂಪಾದನೆ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ವ್ಯವಸಾಯದಿಂದ ಅಷ್ಟು ಸಂಪಾದನೆ ಇರಲಿಲ್ಲ ಎನ್ನುವರು. ನನ್ನ ತಮ್ಮದಿಂದಿರು ನಮ್ಮ ಮದುವೆಗೆ ಸಾಕಷ್ಟು ಸಾಲ ಮಾಡಿದ್ದು ಸದರಿ ಸಾಲ ತೀರಿಸಲು ದಾವಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆಲನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನಗೆ ನನ್ನ ತಂದೆಯ ಮನೆಯ ವ್ಯವಹಾರ ನನಗೆ ಸಂಪೂರ್ಣವಾಗಿ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನ್ನ ತಮ್ಮಂದಿರು ಹಬ್ಬಕ್ಕೆ ಕರೆಯದಿರುವುದರಿಂದ ನಾನು ಹೋಗಿರುವುದಿಲ್ಲ. ಲೇಟ್ ರಂಗೇಗೌಡರ ಮಗ ರಂಗಪ್ಪ ಯಾರೆಂದು ನನಗೆ ಗೊತ್ತಿರುವುದಿಲ್ಲ. ಯಾರ ಮೇಲೆ ಈ ದಾವೆ ಹಾಕಿರುತ್ತೀರಿ ಎಂದರೆ ಸಾಕ್ಷಿದಾರರು ನನ್ನ ತಮ್ಮಂದಿರ ಮೇಲೆ ಹಾಕಿದ್ದು, ಅವರನ್ನು ಹೊರತುಪಡಿಸಿ ಬೇರೆ ಯಾರ ಮೇಲೂ ಹಾಕಿರುವುದಿಲ್ಲ. ಈ ದಾವೆಯನ್ನು ದಾಖಲಿಸಲು ಯಾರು ಹೇಳಿಕೊಟ್ಟಿರುವುದಿಲ್ಲ. ದಾವಆಸ್ತಿಯ ಸರ್ವೆ ನಂಬರ್ 33/7 ಆಗಿರುತ್ತದೆ. ನಾನು ದಾವಆಸ್ತಿಯ ಪಹಣಿಯನ್ನು 1 ವರ್ಷದ ಹಿಂದೆ ನೋಡಿರುತ್ತೇನೆ. ದಾವಆಸ್ತಿಯನ್ನು ಒಂದು ವರ್ಷದ ಹಿಂದೆ ನೋಡಿರುತ್ತೇನೆ. ಅದರಲ್ಲಿ ರಾಗಿ ಜೋಳವನ್ನು ಬೆಳೆದಿದ್ದರು. ನಿಪಿ1 ಮತ್ತು 2 ರಲ್ಲಿ ಯಾವ ಬೆಳೆ ಬೆಳೆಯಲಾಗಿದೆ ಎಂದು ನಮೂದು ಮಾಡಿರುವುದಿಲ್ಲ.

ದಿನಾಂಕ 22.8.2007 ರಂದು 6 ಮತ್ತು 7 ನೇ ಪ್ರತಿವಾದಿಯರ ತಂದೆ ತಾಯಿ ಕುಮಾರ್ ಮತ್ತು ಸುಶೀಲ ರವರು ಹಾಗೂ 6 ಮತ್ತು 7 ನೇ ಪ್ರತಿವಾದಿಯರ ಮೈನರ್ ಗಾರ್ಡಿಯನ್ ಆಗಿ ದಾವಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು

ಮಾರಾಟವಾಗಿರುವ ವಿಚಾರ ಗೊತ್ತಿರುವುದಿಲ್ಲ ಎನ್ನುವರು. ಕ್ರಯಪತ್ರವಾಗಿ 17 ವರ್ಷವಾಗಿರುತ್ತದೆ ಎಂದರೆ ಸಾಕ್ಷಿದಾರರು ಮಾರಾಟವಾಗಿರುವ ವಿಚಾರ ಗೊತ್ತಿರುವುದಿಲ್ಲ ಎನ್ನುವರು. 6 ಮತ್ತು 7 ನೇ ಪ್ರತಿವಾದಿಯರ ತಂದೆ ತಾಯಿಯರು ಒಟ್ಟು ಕುಟುಂಬದ ಸಾಲ ತೀರುವಳಿಗಾಗಿ ಮತ್ತು ಗೃಹಕೃತ್ಯದ ಖರ್ಚಿಗೆ, 6 ಮತ್ತು 7 ನೇ ಪ್ರತಿವಾದಿಯರ ವಿದ್ಯಾಭ್ಯಾಸಕ್ಕಾಗಿ ದಾವಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಆಸ್ತಿಗೆ ಸಂಬಂಧಿಸಿದಂತೆ ಪಂಚಾಯಿತಿ ಪಾಲು ಪಾರಿಕತ್ತು ಆಗಿದ್ದು ಕುಮಾರ್ ರವರ ಪಾಲಿಗೆ ಬಂದ ಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನಮ್ಮ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಎನ್ನುವರು. ಸದರಿ ಕುಮಾರ್ ರವರು ಅವರ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಂದೆಯ ಆಸ್ತಿ ಎನ್ನುವರು. ನನಗೆ ದಾವಆಸ್ತಿಯ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ಕೂಲಿ ಕೆಲಸದ ಸಂಪಾದನೆಯಿಂದ ಆಸ್ತಿಯನ್ನು ಖರೀದಿ ಮಾಡಿದ್ದು ಅವರು ಸದ್ಭಾವನೆ ಖರೀದಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಮಾರಾಟ ಮಾಡಿ ಬಂದ ಹಣದಿಂದ ನನ್ನ ತಮ್ಮ ಕುಮಾರ್ ರವರು ಬೀರನಹಳ್ಳಿ ಗ್ರಾಮದ ಸರ್ವೆ ನಂ.100 ರಲ್ಲಿ 2-10 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ದಾವಆಸ್ತಿಯನ್ನು ಮಾರಾಟ ಮಾಡಿ ಖರೀದಿ ಮಾಡಿರುತ್ತಾರೆ, ನನಗೆ ಆಸ್ತಿಯಲ್ಲಿ ಪಾಲು ಇರುತ್ತದೆ ಎನ್ನುವರು. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ. 8 ನೇ ಪ್ರತಿವಾದಿಯು ದಾವಆಸ್ತಿಯನ್ನು ಖರೀದಿಸಿದ ನಂತರ ಯಾವುದೇ ಅಡೆತಡೆ ಇಲ್ಲದೆ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಮ್ಮಂದಿರು ಪಾಲು ಪಾರಿಕತ್ತು ಮಾಡಿಕೊಂಡಿರುವುದನ್ನು ಪ್ರಶ್ನೆ ಮಾಡಿರುತ್ತೀರಾ ಎಂದರೆ ಸಾಕ್ಷಿದಾರರು ಪಾಲು ಪಾರಿಕತ್ತು ಆಗಿರುವುದಿಲ್ಲ ಎನ್ನುವರು. ದಾವ ಪಹಣಿಯಲ್ಲಿ ನಮೂದಿಸಿರುವ ಎಂ.ಆರ್ ನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. 8 ನೇ ಪ್ರತಿವಾದಿಯು ದಾವಆಸ್ತಿಯ ಪೈಕಿ 2 ಎಕರೆಯನ್ನು ಖರೀದಿಸಿ ಅದರಲ್ಲಿ 2 ಬೋರವೆಲ್ ಕೊರೆಸಿ 150 ಸಿಲ್ವರ್ ಸಸಿಗಳು, 100 ತೆಂಗಿನ ಗಿಡಗಳನ್ನು ಬೆಳೆಸಿ ಅವು ಈಗ ಫಲ ಕೊಡುತ್ತಿವೆ ಎಂದರೆ ಸರಿಯಲ್ಲ. ಸದರಿ 100 ತೆಂಗಿನ ಗಿಡಗಳ ಫಸಲನ್ನು 8 ನೇ ಪ್ರತಿವಾದಿಯು ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 150 ಸಿಲ್ವರ್ ಸಸಿಗಳನ್ನು ನೆಟ್ಟು ಅದಕ್ಕೆ ಕಾಳುಮೆಣಸು ಬಳ್ಳಿಯನ್ನು ಹಬ್ಬಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಾಳು ಮೆಣಸು ಬಳ್ಳಿಯು ಫಲ ನೀಡುತ್ತಿದೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಆಸ್ತಿಯಲ್ಲಿ ಒಂದು ಹಲಸು ಮರ ಹಾಗೂ 5 ಸಪೋಟ ಮರ ಇದ್ದು ಅವು ಸಹ ಫಲ ನೀಡುತ್ತಿವೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯು ಸದರಿ ಆಸ್ತಿಯಲ್ಲಿ ಒಂದು ಶೀಟ್ ಮನೆ ಮಾಡಿಕೊಂಡು ಅಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಅಭಿವೃದ್ದಿ ಮಾಡಿ ಅಲ್ಲೆ ವಾಸವಾಗಿದ್ದರೂ ಸಹ ನಾನು ವಾಸ್ತವಾಂಶವನ್ನು ಮರೆಮಾಚಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ

ಸರಿಯಲ್ಲ. 8 ನೇ ಪ್ರತಿವಾದಿಯು ದಾವಆಸ್ತಿಯನ್ನು ಖರೀದಿ ಮಾಡಿದ ನಂತರ ಅವರ ಹೆಸರಿಗೆ ಖಾತೆಯಾಗಿದ್ದು ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಮನೆ ಇರಲಿಲ್ಲ. 6 ಮತ್ತು 7 ನೇ ಪ್ರತಿವಾದಿಯರ ತಂದೆ ಕುಮಾರ್ ರವರು ಆಲನಹಳ್ಳಿಯಲ್ಲಿ ಜಾಗ ಖರೀದಿಸಿ ಮನೆಯನ್ನು ಕಟ್ಟಿಸಿರುತ್ತಾರೆ. ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಸಹ ಜಾಗ ಖರೀದಿಸಿ ಮನೆಯನ್ನು ಕಟ್ಟಿರುತ್ತಾರೆ. ಸದರಿ ಮನೆಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಅವುಗಳು ಅವರ ಸ್ವಂತ ಮನೆಗಳಾಗಿರುತ್ತವೆ ಎನ್ನುವರು. 8 ನೇ ಪ್ರತಿವಾದಿಗೆ ತೊಂದರೆ ನೀಡಲು ನಾನು ಇತರ ಪ್ರತಿವಾದಿಯರ ಜೊತೆ ಶಾಮೀಲಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ಸದ್ಭಾವನೆಯಿಂದ ಖರೀದಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಎಲ್ಲಾ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸದೇ 8 ನೇ ಪ್ರತಿವಾದಿಗೆ ತೊಂದರೆ ನೀಡಲು ಅವರು ಖರೀದಿಸಿರುವ ಆಸ್ತಿಯ ಮೇಲೆ ದಾವೆ ಹಾಕಿರುತ್ತೇನೆ ಎಂದರೆ ಸಾಕ್ಷಿದಾರರು ಬೇರೆ ಆಸ್ತಿ ಇರುವುದಿಲ್ಲ ಎನ್ನುವರು. 8 ನೇ ಪ್ರತಿವಾದಿಯು ಖರೀದಿಸಿರುವ ಆಸ್ತಿಯನ್ನು ಕಬಳಿಸಲು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.